ಅ) 1991-92, 1992-93ನೇ ಸಾಲಿನಲ್ಲಿ ಸಿ ಮತ್ತು ಡಿ ದರ್ಜೆಯ ಜಮೀನನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವಾಪಸ್ಸು ಪಡೆಯುವ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕಂದಾಯ ದಾಖಲೆಯಲ್ಲಿ ಅರಣ್ಯ ಜಮೀನೆಂದು ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ತೀರ್ಥಹಳ್ಳಿ, ತಾಲ್ಲೂಕಿನಲ್ಲಿ ಎಷ್ಟು ಸರ್ವೆ ನಂಬರ್‌ಗಳಲ್ಲಿ ಎಷ್ಟು ಎಕರೆ ಪ್ರದೇಶವನ್ನು ತಪ್ಪಾಗಿ ನಮೂದಿಸಲಾಗಿದೆ;

ಇ) ಸದರಿ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದ್ದರೂ ನ್ಯೂನತೆ ಸರಿಪಡಿಸಲು ಸರ್ಕಾರವು ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) 66336-09 ಎಕರೆ

ಇ) ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಕಂದಾಯ ಇಲಾಖೆಗೆ ವಾಪಸ್ ಪಡೆದುಕೊಳ್ಳುವುದು ಅನಿವಾರ್ಯತೆ ಆಗಿರುವುದರಿಂದ ದಿನಾಂಕ: 20-2-2003 ರಂದು ಮಾನ್ಯ ಶಿವಮೊಗ್ಗ ಉಪ ವಿಭಾಗಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಅರಣ್ಯ ಇಲಾಖೆ ಹಾಗೂ ಕಂದಾಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಕಂದಾಯ ಇಲಾಖೆಗೆ ವಾಪಾಸು ಪಡೆದು ದಿನಾಂಕ 3-1-1991 ರ ಪೂರ್ವದಲ್ಲಿ ಆರ್ ಟಿ ಸಿ ಯಲ್ಲಿ ಸಂಬಂಧಿಸಿದ ಸರ್ವೆ ನಂ. ಗಳ ಜಮೀನು ಇದ್ದ ಸ್ಥಿತಿಯಲ್ಲೇ ದಾಖಲಿಸಿ ಮುಂದುವರೆಸಲು ಸಭಾ ನಡವಳಿಕೆ ಮಾಡಿ ಆದೇಶಿಸಿರುವುದರಿಂದ ಸದರಿ ಆದೇಶದಂತೆ ಕಂದಾಯ ದಾಖಲೆಗಳಲ್ಲಿ ನಮೂದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹಸಿರು ಯೋಜನೆಯಡಿ ಶಿವಮೊಗ್ಗ ಜಿಲ್ಲೆಗೆ ಹಣ ಬಿಡುಗಡೆ

592 (1013) ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಸಿರು ಯೋಜನೆಯಡಿ ರಾಜ್ಯದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾರ್ಯಕ್ರಮಗಳೇನು;

ಆ) ಈ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಈವರೆಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಈ ಯೋಜನೆಗೆ ಹಣ ಬಿಡುಗಡೆಯಾಗದೆ ಯೋಜನೆ ವಿಫಲವಾಗಿರುವುದು ನಿಜವೇ; ಹಣ ಬಿಡುಗಡೆಯಾಗದಿರಲು ಕಾರಣವೇನು;

ಈ) ಹಸಿರು ಯೋಜನೆಯ ಸಫಲವಾಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹಸಿರು ಯೋಜನೆ ಎಂಬ ಹೆಸರಿನ ಯೋಜನೆಯನ್ನು ಅರಣ್ಯ ಇಲಾಖೆಯಲ್ಲಿ ಕೈಗೆತ್ತಿಕೊಂಡಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಹೊಸನಗರ ತಾಲ್ಲೂಕಿನ ಶ್ರೀ ಸಿದ್ದಲಿಂಗೇಶ್ವರ ಹುಲಿರಾಜ ಮೂಕಾಂಬಿಕ ದೇವಲಾಯ

593 (1198) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಜರಾಯಿ ಇಲಾಖೆಗೆ ಸೇರಿದ ಹೊಸನಗರ ತಾಲ್ಲೂಕಿನ ಕೊಡಚಾದ್ರಿ ಶ್ರೀ ಸಿದ್ಧಲಿಂಗೇಶ್ವರ ಹುಲಿರಾಜ ಮೂಕಾಂಬಿಕ ದೇವಾಲಯದಲ್ಲಿ 1998ರಲ್ಲಿ ವಿಗ್ರಹ ಕಳುವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಬಗ್ಗೆ ಏನು ಕ್ರಮ ಕೈಗೊಂಡಿದೆ;

ಆ) ಪ್ರಸಕ್ತ ಇರುವ ಅಧಿಕೃತ ಪ್ರಧಾನ ಮತ್ತು ಉಪ ಅರ್ಚಕರು ಯಾರು; ಇವರನ್ನು ಬದಲಾವಣೆ ಮಾಡುವ ಉದ್ದೇಶವಿದೆಯೆ;

ಇ) 1998ರಲ್ಲಿ ಈ ಅರ್ಚಕರಿಗೆ ತಸ್ತೀಕ್ ಸಂಬಳ ನೀಡುವಂತೆ ರಾಜ್ಯದ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಇದುವರೆಗೆ ಹಣ ಪಾವತಿ ಮಾಡದಿರಲು ಕಾರಣವೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಹೌದು ಬಂದಿದೆ. ದೇವಾಲಯದಲ್ಲಿ ಶ್ರೀ ಹುಲಿರಾಯ ಪ್ರತಿಮೆಯನ್ನು ದುಷ್ಕರ್ಮಿಗಳು ಕಿತ್ತು ಹಾಕಿದ್ದು, ಇದಕ್ಕೆ ಪುನಃ ಪುನರ್ ಪ್ರತಿಷ್ಠಾಪನೆ ಮಾಡಲಾಗಿದೆ ಹಾಗೂ ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದು, ಹೊಸನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್. ಕ್ರೈಮ್ ನಂ. 33/99 ದಾಖಲಾಗಿ, ಜೆ.ಎಂ.ಎಸ್.ಸಿ ನ್ಯಾಯಾಲಯದಲ್ಲಿ ಸಿಆರ್‌ನಂ. 53/98 ಪ್ರಕರಣ ನಡೆಯುತ್ತಿದ್ದು, ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಆ) ಪ್ರಸ್ತುತ ನಾರಾಯಣ ಜೋಷಿ ಪ್ರಧಾನ ಅರ್ಚಕರಾಗಿ ಶ್ರೀ ನಾಗೇಶ್ ಇವರು ಸಹಾಯಕ ಅರ್ಚಕರಾಗಿ ಕಾರ್ಯ ನಿರ್ವಹಿಸುತ್ತಿರುವರು ಸದ್ಯಕ್ಕೆ ಅರ್ಚಕರ ಬದಲಾವಣೆ ಮಾಡುವ ಉದ್ದೇಶವಿಲ್ಲ.

ಇ) ಅರ್ಚಕರಿಗೆ ಹಣ ಪಾವತಿ ಮಾಡುವ ವಿಚಾರದಲ್ಲಿ ಓಚರ್‌ಗಳನ್ನು ಹಾಜರು ಪಡಿಸಲು ತಹಶೀಲ್ದಾರ್ ಹೊಸನಗರ ಇವರು ತಿಳುವಳಿಕೆ ಪತ್ರ ನೀಡಿದ್ದು, ಸದರಿಯವರು ಓಚರ್‌ಗಳನ್ನು ಸಲ್ಲಿಸಿಲ್ಲವಾದ್ದರಿಂದ ಓಚರ್ ಸಲ್ಲಿಸಿದ ನಂತರ ಹಣ ಪಾವತಿಸಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

594 (1185) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯಲ್ಲಿ ಪ್ರವಾಸೋದ್ಯಮದ ದೃಷ್ಟಿಯಿಂದ ಗುರುತಿಸಲಾದ ಯಾತ್ರಾ ಸ್ಥಳಗಳು, ಪ್ರವಾಸೀ ಕೇಂದ್ರಗಳು ಹಾಗೂ ಪ್ರವಾಸಿ ತಾಣಗಳಾವುವು?

ಆ) ಅವುಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಬಿ. ಇನಾಂದಾರ್, (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಮಂಡ್ಯ, ಮೇಲುಕೋಟೆ, ಶಿವನಸಮುದ್ರ, ಕೆ.ಆರ್.ಎಸ್. ಕೊಕ್ಕರೆ ಬೆಳ್ಳೂರು ಹನುಮಂತನಗರ, ದೊಡ್ಡಮಾಕಳಿ, ಭೀಮೇಶ್ವರಿ, ಶ್ರೀರಂಗಪಟ್ಟಣ ಹಾಗೂ ಮದ್ದೂರು.